## ಭಿನ್ನ ಪ್ರಿವೆಡ್ಡಿಂಗ್ ಶೂಟ್

ಡಿಫರೆಂಟಾಗಿ ಪ್ರಿವೆಡ್ಡಿಂಗ್ ಶೂಟ್ ಮಾಡಿಸುವುದು ಇಂದಿನ ಟ್ರೆಂಡ್. ಪ್ರೀವೆಡ್ಡಿಂಗ್ ಶೂಟ್ ಕಾರಣದಿಂದಲೇ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಆದವರೂ ಇದ್ದಾರೆ.

ನಟ ಚೇತನ್ ಕೂಡ ತಮ್ಮ ಪ್ರಿವೆಡ್ಡಿಂಗ್ ಶೂಟ್ ಅನ್ನು ಇತ್ತೀಚೆಗೆ ವಿಶೇಷವಾಗಿ ಆಚರಿಸಿಕೊಂಡಿದ್ದಾರೆ. ಅಲಂಕಾರ, ಅದ್ದೂರಿ ತಯಾರಿ, ಕಣ್ಸೆಳೆವ ದಿರಿಸಿನ ಆಡಂಬರವಿಲ್ಲದೆ ಅವರು ಹಾಗೂ ಅವರ ಮದುವೆಯಾಗಲಿರುವ ಮೇಘನಾ ಸರಳವಾಗಿ, ವಿಭಿನ್ನವಾಗಿ ಪ್ರಿವೆಡ್ಡಿಂಗ್ ಶೂಟ್‌ಗೆ ನಾಂದಿ ಹಾಡಿದರು. ಅನಾಥ ಮಕ್ಕಳೊಂದಿಗೆ ಕಲರ್ ಪೇಂಟಿಂಗ್ ಮಾಡುತ್ತಾ, ಗಾಳಿಪಟ ಹಾರಿಸುತ್ತಾ, ಆಟವಾಡುತ್ತಾ ಕುಣಿದು ಕುಪ್ಪಳಿಸಿದ ಕ್ಯಾಂಡಿಡ್ ಚಿತ್ರಗಳು ಫ್ರೇಂನಲ್ಲಿ ಬಂದಿಯಾಗಿವೆ. ಇವರ ಈ ನಡೆ ಜನಮೆಚ್ಚುಗೆಯನ್ನೂ ಗಳಿಸಿದೆ. ಅಂದಹಾಗೆ, ಆಶ್ರಮದ ಮಕ್ಕಳು ಹಾಗೂ ವೃದ್ಧರ ಸಮ್ಮುಖದಲ್ಲಿ ಚೇತನ್ ಫೆ. 2ಕ್ಕೆ ಮದುವೆಯಾಗಿದ್ದಾರೆ. ಸರಳವೂ ವಿಭಿನ್ನವೂ ಎನ್ನುವ ಕಲ್ಪನೆಗೆ ಇನ್ನೇನು ಬೇಕು?

ಕೇರಳದ ಜೋಡಿ ಇತ್ತೀಚೆಗೆ ಮಾಡಿದ ಪ್ರಿವೆಡ್ಡಿಂಗ್ ಶೂಟ್ ವೈರಲ್ ಆಗಿತ್ತು. ಗದ್ದೆಯ ಕೆಸರಲ್ಲಿ ವಿಭಿನ್ನ ಪೋಸ್ ನೀಡಿದ್ದರು. ಸರಳ ಹಾಗೂ ಹೊಸ ಕಲ್ಪನೆಯ ಫೋಟೊಶೂಟ್ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.





ಚಿತ್ರ: ವಿನಾಯಕ ಹೆಗಡೆ

ಎನ್ನುತ್ತಾರೆ. ಹೆಣ್ಣಿನ ಮನೆಯವರು ಮದುವೆ ಮಾಡಿಕೊಡುವುದರಿಂದ ಗಂಡಿನ ಮನೆಯವರು ಹೇಗೆಲ್ಲ ವ್ಯವಸ್ಥೆ ಇರಬೇಕು ಎನ್ನುತ್ತಾರೊ ಹಾಗೆ ಮಾಡುತ್ತಾರೆ. ಕೆಲವೊಮ್ಮೆ ಗಂಡಿನವರು ಏನೂ ಕೇಳದಿದ್ದರೂ ಮಗಳ ಮದುವೆ ಅದ್ದೂರಿಯಾಗಿ ಮಾಡಬೇಕೆಂದು ಹುಡುಗಿಯ ತಂದೆ ತಾಯಿಯರೇ ಮುತುವರ್ಜಿ ವಹಿಸುತ್ತಾರೆ. ಹೀಗಾಗಿ ದುಡ್ಡಿನ ಬಗ್ಗೆ ಇಂದಿನವರು ತಲೆ ಕೆಡಿಸಿಕೊಳ್ಳುವುದಿಲ್ಲ. ಲೈಟಿಂಗ್ ನೋಡಲು ಚೆನ್ನಾಗಿರುತ್ತದೆ. ಸ್ಥಳಕ್ಕೆ ಸುಂದರ ಲುಕ್ ಕೊಡುತ್ತದೆ. ಖರ್ಚೂ ಕಡಿಮೆ ಆಗುತ್ತದೆ. ಹೀಗಿದ್ದರೂ ಇಂದಿಗೆ ಹೂವಿನ ಅಲಂಕಾರವೇ ದೊಡ್ಡ ಟ್ರೆಂಡ್. ಹೂವಿನ ಅಲಂಕಾರ ಮದುವೆ ಮನೆಯಲ್ಲಿ ತೀರಾ ಏನೂ ಹೈಲೈಟ್ ಅನಿಸದಿದ್ದರೂ ಫೋಟೊಗಳಲ್ಲಿ ಅದ್ಭುತವಾಗಿ ಬರುತ್ತದೆ. ಅಲ್ಲಿ ಬಳಸುವ ಹೂವು ವಧು – ವರನ ದಿರಿಸಿನ ಬಣ್ಣಕ್ಕೆ ಮ್ಯಾಚ್ ಆಗಬೇಕು ಎಂದು ಕೇಳುತ್ತಾರೆ. ತೊಟ್ಟುಕೊಳ್ಳುವ ಹಾರ, ಮುಡಿಯುವ ಹೂವಿಗೂ ಅಲಂಕರಿಸಲಾದ ಹೂವಿಗೂ ಮ್ಯಾಚಿಂಗ್ ಆಗಬೇಕು ಎಂದು ಬೇಡಿಕೆ ಇಡುತ್ತಾರೆ. ಪ್ರಿವೆಡ್ಡಿಂಗ್ ಶೂಟ್, ರಿಸೆಪ್ಷನ್‌ಗಳಿಗೂ ಡೆಕೊರೇಶನ್ ವ್ಯವಸ್ಥೆ ಕೇಳುತ್ತಾರೆ. ಅವೂ ಅಷ್ಟೇ, ಮ್ಯಾಚ್ ಆಗಬೇಕು. ಸ್ಥಳದ ಅಲಂಕಾರಕ್ಕೆ 10 ಸಾವಿರದಿಂದ ಐದು ಲಕ್ಷ ರೂಪಾಯಿವರೆಗೆ ಖರ್ಚು ಮಾಡುವವರೂ ಇದ್ದಾರೆ'.



ವಿನಾಯಕ ಹೆಗಡೆ

'ಗುಲಾಬಿ ಹೂವಿಗೆ ಹೆಚ್ಚು ಬೇಡಿಕೆ ಇದೆ. ಫ್ಯಾಬ್ರಿಕ್ ಅಲಂಕಾರ ಇಂದಿನ ಟ್ರೆಂಡ್. ಮದುವೆ ಮನೆ ಅಲಂಕಾರ ಮಾಡಿಸುವವರಲ್ಲಿ ಶ್ರೀಮಂತರು, ಮಧ್ಯಮ ವರ್ಗದವರು ಎನ್ನುವ ವ್ಯತ್ಯಾಸವಿಲ್ಲ. ಎಲ್ಲರೂ ವಿಚಾರಿಸುತ್ತಾರೆ. ಆದರೆ ನನ್ನ ಅನುಭವದ ಪ್ರಕಾರ ಮದುವೆಗಾಗಿ ಸಾಲ ಮಾಡಿಯಾದರೂ ಸರಿ, ಹೆಚ್ಚು ಹಣ ಖರ್ಚು ಮಾಡುವುದು ಮಧ್ಯಮ ವರ್ಗದವರೇ. ಮಧ್ಯಮ ವರ್ಗದವರಿಗೆ ಹೋಲಿಸಿದರೆ ಶ್ರೀಮಂತರೇ ಕಡಿಮೆ ಖರ್ಚು ಮಾಡುತ್ತಾರೆ' ಎನ್ನುತ್ತಾರೆ 'ಸೆಲಿಬ್ರೆಟ್ಸ್ ವೆಡ್ಡಿಂಗ್ ಡೆಕೊರೇಟರ್ಸ್' ಮಾಲೀಕ ವಿಜಯ್ ಪ್ರಶಾಂತ್.

'ಜಾಸ್ತಿ ಹಣ ಖರ್ಚು ಮಾಡಿ ಅಲಂಕಾರ ಮಾಡಿಸಬೇಕು ಎನ್ನುವುದಕ್ಕಿಂತ ಉತ್ತಮವಾದ ಅಲಂಕಾರ, ವಿನ್ಯಾಸಗಳಿಗೆ ಮನಸೊಡ್ಡಿ' ಎಂದೂ ಅವರು ಸಲಹೆ ನೀಡುತ್ತಾರೆ.

### ಛಾಯಾಗ್ರಹಣ

'ಈಗಿನ ಮದುವೆಗಳಲ್ಲಿ ಮದುವೆ ಶಾಸ್ತ್ರ ನಡೆಸಿಕೊಡುವ ಧಾರ್ಮಿಕರಿಗಿಂತ ಫೋಟೊಗ್ರಾಫರ್‌ಗಳೇ ಹೆಚ್ಚು ಪ್ರಭಾವಿಗಳು' ಎಂಬ ಮಾತು ಜೋಕ್‌ನ ಹಾಗೇ ಅನಿಸಿದರೂ ವಾಸ್ತವ ಇದಕ್ಕಿಂತ ಭಿನ್ನವೇನಿಲ್ಲ. ಕ್ಯಾಮೆರಾಮೆನ್ ಇಲ್ಲದ ಮದುವೆ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ.

ಇತ್ತೀಚೆಗೆ ಮೆಹೆಂದಿ ಶಾಸ್ತ್ರವನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುವುದರ ಜೊತೆಗೆ ಪ್ರಿವೆಡ್ಡಿಂಗ್ ಶೂಟ್ ಮಾಡಿಸುವುದು ಬಲು ದೊಡ್ಡ ಟ್ರೆಂಡ್. ವಿದೇಶಕ್ಕೆ ಹೋಗಿ ಅಥವಾ ಬೇರೆ ಬೇರೆ ಕಡೆಯ ಜನಪ್ರಿಯ ಸ್ಥಳಗಳಿಗೆ ಹೋಗಿ ಛಾಯಾಗ್ರಹಣ ಮಾಡಿಸಿಕೊಳ್ಳುವವರೂ ಇದ್ದಾರೆ.

ಬೆಂಗಳೂರಿನಲ್ಲಿ ಫ್ರೀಲಾನ್ಸ್ ಛಾಯಾಗ್ರಾಹಕರಾಗಿರುವ ವಿನಾಯಕ ಹೆಗಡೆ